ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಸಂಪಾದಕ : ಮಂಜು ಬನವಾಸೆ
ಹಾಸನ | E-mail : kannadapostnews@gmail.com | / ಕನ್ನಡ post | Price: ₹1
Vol.No.02 | Issue. 133 | Pages. 2 | Date: 29-04-2026, WEDNESDAY | RNI NO: KARKAN/2024/89601 | Kannada Daily
ಸಂಪುಟ : 02 - ಸಂಚಿಕೆ : 133 - ಪುಟಗಳು : 2 | 29-04-2026 | ಬುಧವಾರ | Ph: 8762954248 | ದರ : ₹1

# ಕಾಡಾನೆ ಓಡಾಟ: ಜನರಿಗೆ ನಿಖರ ಮಾಹಿತಿ ಸಿಗುವಂತಾಗಲಿ

## ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸೂಚನೆ | ತ್ವರಿತ ಕ್ರಮಕ್ಕೆ ನಿರ್ದೇಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ತಂತ್ರಜ್ಞಾನ ಬಳಸಿ ಕಾಡಾನೆಗಳ ಚಲನೆಯನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿ ಸುಧಾರಣೆ ಮಾಡಿಕೊಂಡು ಟ್ರ್ಯಾಕಿಂಗ್ ಮಾಡಿ ನಿಖರವಾಗಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಕ್ರಮಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ಆನೆ-ಮಾನವ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಜಿಲ್ಲಾ ಅರಣ್ಯ ಇಲಾಖೆ ಅಭಿವೃದ್ಧಿಪಡಿಸಿರುವ ಆನೆ ಟ್ರ್ಯಾಕಿಂಗ್ ಮತ್ತು ಮಾನಿಟರಿಂಗ್ ವ್ಯವಸ್ಥೆಯ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ಮಂಗಳವಾರ ಮಾಹಿತಿ



ಪಡೆದು ಮಾತನಾಡಿದ ಅವರು, ಬೇಲೂರು, ಸಕಲೇಶಪುರ ಹಾಗೂ ಅರಕಲಗೂಡು ಭಾಗದಲ್ಲಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷ ನಡೆದಿದೆ. ಅದರಲ್ಲಿ ಆನೆ ಮತ್ತು ಮಾನವ ಸಂಘರ್ಷ ಹೆಚ್ಚಾಗಿದೆ ಎಂದು ತಿಳಿಸಿದರು.

ಹಿಂದಿನ ಎರಡು ವರ್ಷದಲ್ಲಿ ಜಿಲ್ಲೆಯಲ್ಲಿ 6 ಪ್ರಕರಣ ತೀವ್ರ ಸ್ವರೂಪದ್ದಾಗಿದ್ದು, 6 ಜನರು ಸಾವನ್ನಪ್ಪಿದ್ದಾರೆ. ಕಳೆದ ವರ್ಷ ಸಾವಿನ ಸಂಖ್ಯೆ 3ಕ್ಕೆ ಇಳಿದಿದೆ. ಈ ವರ್ಷ ಒಂದು ಸಾವು ಸಂಭವಿಸಿದೆ. ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಲು ನಿರಂತರವಾಗಿ ಸಭೆ ನಡೆಸಿ ಪ್ರಯತ್ನಿಸುತ್ತಿದ್ದೇವೆ. ಅದಕ್ಕೆ ಸಾರ್ವಜನಿಕರ ಸಹಕಾರ ಬಹುಮುಖ್ಯ ಎಂದು ತಿಳಿಸಿದರು.

ಕಾಡಾನೆಗಳು ವಸತಿ ಪ್ರದೇಶದಿಂದ 5 ಕಿ.ಮೀ. ದೂರದಲ್ಲಿರುವುದನ್ನು ಜನರಿಗೆ ಮುನ್ಸೂಚನೆ ಮಾಹಿತಿಯನ್ನು ನೀಡಬೇಕು ಹಾಗೂ ಕಾಡಾನೆ ಹಾವಳಿ ಇರುವ ಪ್ರದೇಶದಲ್ಲಿರುವ ಕಾಫಿ ತೋಟದ ಮಾಲೀಕರು ಗಂಭೀರವಾಗಿ ಪರಿಗಣಿಸಿ ಜವಾಬ್ದಾರಿಯಿಂದ ಕಾರ್ಮಿಕರಿಗೆ ಮಾಹಿತಿಯನ್ನು ನೀಡಬೇಕು ಎಂದು ತಿಳಿಸಿದರು.

ಆನೆ ದಾಳಿ ಮಾಡಬಹುದಾದ ಅಪಾಯವಿರುವ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಸಹಾಯಕರು, ಬಿಲ್ ಕಲೆಕ್ಟರ್, ಅಂಗನವಾಡಿ ಕಾರ್ಯಕರ್ತೆಯರು,ಆಶಾ ಕಾರ್ಯಕರ್ತರು ಹಾಗೂ ಪೊಲೀಸರು ಸೇರಿದಂತೆ ಅಗತ್ಯವಿರುವ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಪರಿಣಾಮವಾಗಿ ತಳಮಟ್ಟದಲ್ಲಿ ಅನುಷ್ಠಾನ ಮಾಡುವ ಮೂಲಕ ಜನರಿಗೆ ಮಾಹಿತಿ ನೀಡಿ ಮುಂಜಾಗ್ರತಾ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

### ಬೆಳಿಗ್ಗೆ ಹೊತ್ತು ಓಡಾಟ ಕಡಿಮೆ ಇರಲಿ

ಪ್ರಕೃತಿ ನಮ್ಮ ಹತೋಟಿಯಲ್ಲಿ ಇಲ್ಲ, ಮಾನವ ಮತ್ತು ವನ್ಯಜೀವಿಗಳ ಸಂಘರ್ಷದಿಂದಾಗುವ ಸಾವು ನೋವುಗಳನ್ನು ತಪ್ಪಿಸಲು ಸರ್ಕಾರದ ಪ್ರಯತ್ನದ ಜೊತೆಗೆ ಜನರ ಸಹಕಾರ ಬಹುಮುಖ್ಯ ಈ ನಿಟ್ಟಿನಲ್ಲಿ ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ತಿಳಿಸಿದರು.

ಈ ಹಿಂದಿನ ಸಾವು-ನೋವುಗಳನ್ನು ಅವಲೋಕಿಸಿದರೆ ಬೆಳಗಿನ 5 ಗಂಟೆಯಿಂದ 7 ಗಂಟೆ ಹಾಗೂ ಸಂಜೆ 6 ರಿಂದ 7 ಗಂಟೆಯೊಳಗೆ ಸಂಭವಿಸಿರುವುದು ಕಂಡುಬರುತ್ತದೆ. ಜನರು ಈ ವೇಳೆಯಲ್ಲಿ ಹೆಚ್ಚಾಗಿ ಓಡಾಡುವುದನ್ನು ನಿಲ್ಲಿಸಿ ಅನಾಹುತಗಳನ್ನು ತಡೆಗಟ್ಟಲು ಸಹಕರಿಸಬೇಕು ಎಂದರು.

ಈ ಅವಧಿಯಲ್ಲಿ ಅಲರ್ಟ್ ಕೊಟ್ಟರು ಜನರಿಗೆ ಸರಿಯಾಗಿ ತಲುಪದೆ ಇರಬಹುದು. ಆ ಕಾರಣಕ್ಕಾಗಿ ಹಿಂದಿನ ದಿನವೇ ಆನೆಗಳ ಚಲನೆ ಕುರಿತು ನಿರ್ದಿಷ್ಟ ಸ್ಥಳದ ಬಗ್ಗೆ ನಿಖರವಾಗಿ ಜನರಿಗೆ ಮಾಹಿತಿ ನೀಡಬೇಕು. ಮುನ್ಸೂಚನೆ ಉಲ್ಲಂಘನೆ ಮಾಡುವುದನ್ನು ಗಂಭೀರವಾಗಿ ಪರಿಗಣಿಸಿ ಅಂತಹವರ ವಿರುದ್ಧ ಪ್ರಕರಣ ದಾಖಲಿಸಲು ಸೂಚಿಸಿದರು.

### ಕಾಡಾನೆ ಹಾವಳಿ ಪ್ರದೇಶಕ್ಕೆ ಸಚಿವರ ಭೇಟಿ

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ಬಿಕ್ಕೋಡು ಗ್ರಾಮದಲ್ಲಿ ಆನೆಗಳ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಪರಿಶೀಲಿಸಿದರು. ನಂತರ ಇಟಿಎಫ್ ಸಿಬ್ಬಂದಿಯಿಂದ ಮಾಹಿತಿ ಪಡೆದರು.

ನಂತರ ಚಿಕ್ಕಮಗಳೂರು-ಬೇಲೂರು ರೈಲ್ವೆ ಕಾಮಗಾರಿ ವೀಕ್ಷಣೆ ಮಾಡಿ ಕಾಮಗಾರಿ ಪರಿಶೀಲಿಸಿದರು. ನಂತರ ಬೇಲೂರಿನ ಚನ್ನಕೇಶವ ದೇವಾಲಯಕ್ಕೆ ಭೇಟಿ ನೀಡಿದರು.

ಬೇಲೂರಿನಿಂದ ಹಾಸನಕ್ಕೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 373 ಕಾಮಗಾರಿ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು.

### 6 ತಿಂಗಳಲ್ಲಿ ಕಾಡಾನೆಗಳ ಸ್ಥಳಾಂತರ

ಕಾಡಾನೆಗಳ ಸ್ಥಳಾಂತರ ಮಾಡಿ ಎಂಬ ಜನರ ಬೇಡಿಕೆ ಇದೆ ಈ ನಿಟ್ಟಿನಲ್ಲಿ ಒಂದು ಪ್ರದೇಶವನ್ನು ಗುರುತಿಸಿ ಸಾಫ್ಟ್ ರೀಲಿಫ್ ಸೆಂಟರ್ ಮಾಡಲು ತೀರ್ಮಾನ ಅಂತಿಮ ಹಂತದಲ್ಲಿದೆ. ಅನುದಾನ ಲಭ್ಯವಿದೆ ಹಾಗೂ ಹೈಕೋರ್ಟ್ ಕೆಲವು ಮಾರ್ಗ ಸೂಚಿಗಳನ್ನು ನೀಡಿದ್ದು, 6 ತಿಂಗಳಲ್ಲಿ ಯೋಜನೆಯನ್ನು ಕಾರ್ಯ ರೂಪಕ್ಕೆ ತಂದು ಭಾಗಶಃ ಕಾಡಾನೆಗಳನ್ನು ಸಾಫ್ಟ್ ರೀಲಿಫ್ ಸೆಂಟರ್‌ಗೆ ಸ್ಥಳಾಂತರ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಅವರು ಆನೆ ಹಾವಳಿ ತಡೆಯಲು ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಚಿರತೆ ಮತ್ತು ಕಾಡುಕೋಣಗಳ ದಾಳಿಯಿಂದ ಮೃತಪಟ್ಟಿರುವ ಬಗ್ಗೆ ವಿವರಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಉಪಸ್ಥಿತರಿದ್ದರು.

# ರಾಷ್ಟ್ರ ಪ್ರಗತಿಗೆ ಸಾಮರಸ್ಯದ ಬದುಕು ಮುಖ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಸಮಾಜದ ಎಲ್ಲ ವರ್ಗಗಳ ಒಗ್ಗಟ್ಟು, ಸಾಮರಸ್ಯದಿಂದ ಬದುಕಿದರೆ ದೇಶದ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಗಣಪತಿ ಹೆಗಡೆ ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ರಾಷ್ಟ್ರೋದಯ ಸೇವಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಸಾಮಾಜಿಕ ಸದ್ಭಾವ ಸಭೆಯಲ್ಲಿ ಮಾತನಾಡಿ, ಸಮಾಜದಲ್ಲಿ ಸಾಮರಸ್ಯ, ಏಕತೆ ಮತ್ತು ಪರಸ್ಪರ ಗೌರವದ ಮಹತ್ವ ಇರಬೇಕು. ಒಬ್ಬರನ್ನೊಬ್ಬರು ಜಾತಿ ಮತ ಬೇಧಿಸಿ ಪರಸ್ಪರ ಪ್ರೀತಿ ವಿಶ್ವಾಸದಿಂದ ಸಾಗಿದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ. ನಾವುಗಳೆಲ್ಲರೂ ಎಂದೆಂದೂ ಸ್ವದೇಶಿ ವಸ್ತುಗಳನ್ನು ಬಳಸಬೇಕು. ಕುಟುಂಬದ ವ್ಯವಸ್ಥೆಗೆ ಹೆಚ್ಚು ಒತ್ತು ನೀಡುವುದರೊಂದಿಗೆ ನಾವೆಲ್ಲರೂ ದೇಶ ಮೊದಲು ಎಂಬ ಭಾವನೆ ಬೆಳೆಸಿಕೊಳ್ಳಬೇಕು ಎಂದರು. ಸಭೆಯಲ್ಲಿ ತಾಲೂಕಿನ ಎಲ್ಲಾ ಸಮುದಾಯಗಳ ಮುಖಂಡರುಗಳು ಹಾಗೂ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ವಿವಿಧ ಸಮುದಾಯಗಳ ಪ್ರತಿನಿಧಿಗಳು ಅಭಿಪ್ರಾಯ ಹಂಚಿಕೊಂಡು ಸಾಮಾಜಿಕ ಸದ್ಭಾವನೆಗಾಗಿ ಒಗ್ಗಟ್ಟಿನ ಅಗತ್ಯವನ್ನು ಒತ್ತಿ ಹೇಳಿದರು. ಸಮಾಜದಲ್ಲಿ ಒಗ್ಗಟ್ಟು ಮತ್ತು ಸಹಬಾಳ್ವೆ ಹೆಚ್ಚಿಸಲು ಇಂತಹ ಕಾರ್ಯಕ್ರಮಗಳು ಇನ್ನಷ್ಟು ಅಗತ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

# ಸೇತುವೆ ಕಾಮಗಾರಿ: ರೈಲು ಸಂಚಾರ ರದ್ದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ಮತ್ತು ಮಂದಗೆರೆ ರೈಲ್ವೆ ನಿಲ್ದಾಣಗಳ ನಡುವೆ ಸೇತುವೆ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಕೆಲ ರೈಲುಗಳ ಸೇವೆಯಲ್ಲಿ ಬದಲಾವಣೆ ಮಾಡಲಾಗಿದೆ.

ಮೇ 4ರಂದು ಮೈಸೂರು-ಅರಸೀಕೆರೆ ಪ್ಯಾಸೆಂಜರ್ (ರೈಲು ಸಂ. 56266), ಅರಸೀಕೆರೆ-ಮೈಸೂರು ಪ್ಯಾಸೆಂಜರ್ (ರೈಲು ಸಂ. 56265) ಹಾಗೂ ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ (ರೈಲು ಸಂ. 06269) ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ.

ಮೇ 4 ರಂದು ಮೈಸೂರಿನಿಂದ ಹೊರಡುವ ಮೈಸೂರು-ಯಶವಂತಪುರ ಎಕ್ಸ್‌ಪ್ರೆಸ್ ರೈಲನ್ನು ಮಾರ್ಗಮಧ್ಯೆ ಸುಮಾರು 2 ಗಂಟೆ 30 ನಿಮಿಷ ನಿಲ್ಲಿಸಲಾಗುತ್ತದೆ. ಏ. 29 ಮತ್ತು ಮೇ 6ರಂದು ಅರಸೀಕೆರೆ-ಮೈಸೂರು ಎಕ್ಸ್‌ಪ್ರೆಸ್ (56265) ರೈಲು ಅರಸೀಕೆರೆಯಿಂದ ಹಾಗು ಮೈಸೂರು-ಎಸ್‌ಎಂವಿಟಿ ಬೆಂಗಳೂರು ಪ್ಯಾಸೆಂಜರ್ (06269) ರೈಲು ಮೈಸೂರಿನಿಂದ ನಿಗದಿತ ಸಮಯಕ್ಕಿಂತ 2 ಗಂಟೆ 30 ನಿಮಿಷ ತಡವಾಗಿ ಹೊರಡಲಿದೆ ಎಂದು ಮೈಸೂರು ವಿಭಾಗದ ಹಣಕಾಸು ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ ಪೃಥ್ವಿ ಎಸ್. ಹುಲ್ಲತ್ತಿ ತಿಳಿಸಿದ್ದಾರೆ.

# ಅಂಬೇಡ್ಕರ್ ಬ್ಯಾನರ್ ಹರಿದ ಕಿಡಿಗೇಡಿಗಳು: ಕ್ರಮಕ್ಕೆ ಆಗ್ರಹ

ಹಾಸನ: ತಾಲ್ಲೂಕಿನ ಕೊಕ್ಕನಘಟ್ಟ ಗ್ರಾಮದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಬ್ಯಾನರ್ ಹರಿದು ಹಾಕಿರುವ ಘಟನೆ ನಡೆದಿದೆ.



ಈ ಕುರಿತು ಗ್ರಾಮಾಂತರ ಠಾಣೆಗೆ ದೂರು ನೀಡಿರುವ ಜಾತಿ ನಿಂದನೆ ಸಮಿತಿ ಸದಸ್ಯೆ ಶಿವಮ್ಮ ಮಾತನಾಡಿ, ಕೊಕ್ಕನಘಟ್ಟ ಗ್ರಾಮದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಹಾಕಿದ್ದ ಬ್ಯಾನರ್ ಅನ್ನು ಭಾನುವಾರ ರಾತ್ರಿ ಕಿಡಿಗೇಡಿಗಳು ಹರಿದು ವಿರೂಪಗೊಳಿಸಿದ್ದಾರೆ ಎಂದು ಆರೋಪಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಅವರು ಸರ್ವ ಜನಾಂಗಕ್ಕೂ ಸಮಾನ ಅವಕಾಶ ನೀಡಿ ಸಮಾಜದಲ್ಲಿ ಎಲ್ಲರೂ ಗೌರವಯುತವಾಗಿ ಬದುಕುವಂತೆ ಸಂವಿಧಾನ ರೂಪಿಸಿದ್ದಾರೆ. ಕೆಲ ಕಿಡಿಗೇಡಿಗಳು ಇಂದಿಗೂ ಅವರನ್ನು ದ್ವೇಷಿಸುವ, ಅಪಮಾನ ಮಾಡುವ ಕೆಲಸ ಮಾಡುತ್ತಿದ್ದು, ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದರು.

ಕೊಕ್ಕನಘಟ್ಟ ಗ್ರಾಮದಲ್ಲಿ ನಡೆದಿರುವ ಅಹಿತಕರ ಘಟನೆ ಇದೇ ಮೊದಲಲ್ಲ. 3 ವರ್ಷಗಳಿಂದ ಇದೇ ರೀತಿಯ ದುಷ್ಕೃತ್ಯ ಎಸಗಲಾಗುತ್ತಿದೆ. ಪೊಲೀಸರು ಶೀಘ್ರ ಕ್ರಮ ಜರುಗಿಸಿದ್ದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

ಗ್ರಾಮದಲ್ಲಿ ಅಶಾಂತಿ ವಾತಾವರಣ ಸೃಷ್ಟಿಯಾಗಬಾರದೆಂಬ ದೃಷ್ಟಿಯಿಂದ ಕಳೆದ 2 ವರ್ಷಗಳಿಂದ ಸಂಧಾನ ಮಾತುಕತೆ ಮಾಡಿ ಶಾಂತಿ ಕಾಪಾಡಿಕೊಂಡು ಬಂದಿದ್ದೇವೆ. ಈ ಬಾರಿ ಅಲ್ಲಿನ ಸಿಸಿಟಿವಿ ವಿಡಿಯೋ ಆಧರಿಸಿ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಗ್ರಾಮಸ್ಥರಾದ ಕುಮಾರಿ, ಸ್ವಾಮಿ, ಅರುಣ್, ಸಾಗರ್, ಗಿರೀಶ್, ರವಿ, ಪ್ರಮೋದ್, ಸ್ವಾಮಿ, ದೇವರಾಜ್, ಭರತ್, ಗೌತಮ್, ಸಚಿನ್, ಕಿರಣ್, ಶ್ರೀನಿವಾಸ್, ಸಾಗರ್, ಪಾಪಣ್ಣ, ಸುನೀಲ್ ಆನಂದ್ ಇದ್ದರು.

# ಕುಡಿಯುವ ನೀರಿಗೆ ವ್ಯತ್ಯಯವಾಗದಂತೆ ನಿಗಾ ವಹಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಸಾರ್ವಜನಿಕರಿಗೆ ಕುಡಿಯುವ ನೀರಿನಲ್ಲಿ ಯಾವುದೇ ರೀತಿ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಶಾಸಕ ಹೆಚ್.ಪಿ. ಸ್ವರೂಪ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತ್ರೈಮಾಸಿಕ ಕೆಡಿಪಿ ಸಭೆ ಅಧ್ಯಕ್ಷತೆ ವಹಿಸಿ ಹಾಸನ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.




ಬಿಸಿಲಿನ ಮಟ್ಟ ಹೆಚ್ಚಾಗುತ್ತಿರುವುದರಿಂದ ಆರೋಗ್ಯ ಇಲಾಖೆ ವತಿಯಿಂದ ಕಾರ್ಯಕ್ರಮಗಳನ್ನು ಕೈಗೊಂಡು ಸಾರ್ವಜನಿಕರು ಯಾವ ರೀತಿಯ ಆಹಾರ ಸೇವಿಸಬೇಕು. ಆರೋಗ್ಯದ ಬಗ್ಗೆ ಯಾವ ರೀತಿ ಕಾಳಜಿ ವಹಿಸಬೇಕು ಎಂಬುದರ ಬಗ್ಗೆ ಪ್ರಚಾರ ಕೈಗೊಳ್ಳಿ ಹಾಗೂ ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸುವಂತೆ ಅವರಿಗೆ ತಿಳಿಸಿ ಎಂದು ಹೇಳಿದರು.

ತಾಲ್ಲೂಕಿನ ಎಲ್ಲಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಯಾವ ಚಿಕಿತ್ಸೆಗೆ ಎಷ್ಟು ಹಣ ಎಂಬುದನ್ನು ನಾಮಫಲಕಗಳಲ್ಲಿ ಅಳವಡಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರೈತರಲ್ಲಿ ಆಲೂಗೆಡ್ಡೆ, ತರಕಾರಿ ಸೇರಿ ಇನ್ನಿತರ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಿ ಎಂದರಲ್ಲದೆ ವಿವಿಧ ಬೆಳೆಗಳನ್ನು ಬೆಳೆಯುವ ಬಗ್ಗೆ ಆಕಾಶವಾಣಿ ಮುಖಾಂತರ ಪ್ರಚಾರ ಕೈಗೊಳ್ಳುವಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪುರದಮ್ಮ ರಸ್ತೆ ಕಿರಿದಾಗಿದ್ದು ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ಅದಷ್ಟು ಬೇಗ ಕ್ಲಿಯರ್ ಮಾಡಿಸಿ ರಸ್ತೆ ಕಾಮಗಾರಿಗೆ ಅವಕಾಶ ಮಾಡಿಕೊಡಬೇಕು. ವಸತಿ ಶಾಲೆಗಳಲ್ಲಿ ಕುಡಿಯುವ ನೀರಿನಲ್ಲಿ ವ್ಯತ್ಯಯ ವಾಗದಂತೆ ನೋಡಿಕೊಳ್ಳಿ ಹಾಗೂ ರಾಗಿಂಗ್ ನಂತಹ ಅಸಭ್ಯ ವರ್ತನೆಗಳು ನಡೆಯದಂತೆ ನೋಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಇತ್ತೀಚೆಗೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಭಯ ಪಡುವಂತಾಗಿದೆ ಆದ್ದರಿಂದ ನಾಯಿಗಳ ಹಾವಳಿ ತಡೆಗಟ್ಟುವಿಕೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಇದೆ ವೇಳೆ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2024-25ನೇ ಸಾಲಿನ ಸಹಾಯಧನ ಯೋಜನೆಯಡಿ ಆಯ್ಕೆಯಾದ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು.

ತಾಲ್ಲೂಕು ತಹಶೀಲ್ದಾರ್ ಗೀತಾ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಇತರರಿದ್ದರು.

# ಕಾಂಗ್ರೆಸ್ ಮಹಿಳಾ ವಿರೋಧಿ ನೀತಿಗೆ ಪ್ರತ್ಯುತ್ತರ ಖಚಿತ

## ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ಹಿನ್ನೆಲೆ | ಸಿಮೆಂಟ್ ಮಂಜು ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದ ನಿಲುವಿಗೆ ಮುಂದಿನ ದಿನಗಳಲ್ಲಿ ದೇಶದ ಮಹಿಳೆಯರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ತಾಲೂಕು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಆಯೋಜಿಸಿದ್ದ ಜನಾಕ್ರೋಶ ಸಭೆಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ರಾಜಕೀಯದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಮಹಿಳಾ ಮೀಸಲಾತಿ ವಿಧೇಯಕ ತರಲು ಕೇಂದ್ರ ಸರ್ಕಾರ ಹೊರಟಿತ್ತು. ಅದಕ್ಕೆ ವಿರೋಧ ವ್ಯಕ್ತಪಡಿಸುವುದು ದುರದೃಷ್ಟಕರ ಬೆಳವಣಿಗೆ




ಎಂದರು. ಮಹಿಳಾ ಸಬಲೀಕರಣಕ್ಕೆ ಇದು ಮಹತ್ವದ ಹೆಜ್ಜೆಯಾಗಿದ್ದು, ವಿರೋಧಿಸುವುದು ಮಹಿಳೆಯರ ಹಕ್ಕುಗಳಿಗೆ ಧಕ್ಕೆ ತರುವಂತಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವುದು ಕೇವಲ ತೋರಿಕೆಗಾಗಿ ಎಂಬುದು ನಾರಿ ಶಕ್ತಿ ವಂದನ್ ಅಧಿನಿಯಮದ ವಿರುದ್ಧ ಅವರು ತೋರಿದ ನಿಲುವಿನಿಂದ ಸಾಬೀತಾಗಿದೆ ಎಂದರು.

ದಶಕಗಳ ಕಾಲ ಮಹಿಳೆಯರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು, ಇಂದು ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಶೇಕಡಾ 33ರಷ್ಟು ರಾಜಕೀಯ ಮೀಸಲಾತಿ ನೀಡುವ ಐತಿಹಾಸಿಕ ಮಸೂದೆಯನ್ನು ಬೆಂಬಲಿಸುವ ಬದಲು ಅದರ ವಿರುದ್ಧ ನಿಂತಿರುವುದು ಅತ್ಯಂತ ಖಂಡನೀಯ ಎಂದರು.

ಈ ವಿರೋಧ ಪಕ್ಷಗಳು ಮಸೂದೆಯ ವಿರುದ್ಧ ಮತ ಚಲಾಯಿಸುವ ಮೂಲಕ ತಾವು ಮಹಿಳಾ ವಿರೋಧಿಗಳು ಎಂಬುದನ್ನು ಇಡೀ ದೇಶಕ್ಕೆ ಮತ್ತೊಮ್ಮೆ ಸ್ಪಷ್ಟಪಡಿಸಿವೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಮಾತನಾಡಿ, ಮಹಿಳೆಯರಿಗೆ ನಿಜವಾದ ಅಧಿಕಾರ ಸಿಗುವುದನ್ನು ಸಹಿಸದ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಈ ಧೋರಣೆಯು ಅವರ ಸಂಕುಚಿತ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಹಿಂದೆ ಇದೇ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಹಿಳಾ ಮೀಸಲಾತಿಯನ್ನು ಜಾರಿಗೆ ತರದೆ ಕಾಲಹರಣ ಮಾಡಿತ್ತು; ಈಗ ಅದನ್ನು ಜಾರಿಗೆ ತರಲು ಮುಂದಾದಾಗ ಕ್ಷುಲ್ಲಕ ಕಾರಣಗಳನ್ನು ನೀಡಿ ವಿರೋಧಿಸುತ್ತಿದೆ ಎಂದರು.

# ಶಾಸಕರ ಸ್ವಪ್ರತಿಷ್ಠೆಯಿಂದ ಬಡವರ ಬದುಕು ಬೀದಿಗೆ

ಹಾಸನ: ಶಾಸಕ ಎ.ಮಂಜು ಅವರ ಸ್ವಪ್ರತಿಷ್ಠೆಯಿಂದ 45ಕ್ಕೂ ಹೆಚ್ಚು ಕುಟುಂಬಗಳು ಹಕ್ಕುಪತ್ರ ಇದ್ದರೂ ಖಾತೆ ಇಲ್ಲದೆ ಮನೆ ಕಟ್ಟಿಕೊಳ್ಳಲಾಗದೆ ಪರಿತಪಿಸುವಂತಾಗಿದೆ ಎಂದು ರೈತ ಸಂಘದ ಮುಖಂಡ ಯೋಗಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಗ್ರಾಮದಲ್ಲಿ 47 ಕುಟುಂಬಸ್ಥರಿಗೆ ಹಕ್ಕುಪತ್ರ ನೀಡಿದ್ದರೂ ರಾಜಕೀಯ ಕಾರಣದಿಂದ ಖಾತೆ ಮಾಡಿಕೊಡಲು ಹಿಂದೇಟು ಹಾಕುತ್ತಿದ್ದಾರೆ. ಎ.ಟಿ.ರಾಮಸ್ವಾಮಿ ಅವರು ಕ್ಷೇತ್ರ ಶಾಸಕರಾಗಿದ್ದಾಗ ನಿವೇಶನ ರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯಡಿ ಬಡವರಿಗೆ ಹಕ್ಕುಪತ್ರ ನೀಡಲಾಗಿದೆ. ಆದರೆ ಪ್ರಸ್ತುತ ಶಾಸಕರಾಗಿರುವ ಎ.ಮಂಜು ಅವರು ಈಗ ಇ-ಸ್ವತ್ತು, ಖಾತೆ ಮಾಡಿಕೊಟ್ಟರೆ ಅದರ ಕೊಡುಗೆ ಎ.ಟಿ.ರಾಮಸ್ವಾಮಿ ಅವರಿಗೆ ಸಲ್ಲುತ್ತದೆಂದು ಅಧಿಕಾರಿಗಳ ಮೂಲಕ ಕಾರ್ಯಕ್ಕೆ ಅಡ್ಡಿಯಾಗುತ್ತಿದ್ದಾರೆ ಎಂದು ಆರೋಪಿಸಿದರು.

ರಾಮನಾಥಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಟವಾಳುವಿನ ಸರ್ವೆ ನಂ. 12ರಲ್ಲಿ 47 ಜನರಿಗೆ 30★40ರಂತೆ ಜಾಗ ಗುರುತಿಸಿ ಹಕ್ಕುಪತ್ರ ನೀಡಲಾಗಿದೆ. ಆದರೆ




ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಖಾತೆ ಮಾಡಿಕೊಡಿ ಎಂದು ಆಗ್ರಹಿಸಿ ಎಷ್ಟೋ ಬಾರಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. 2022ರ ಅ. 10ರಂದು ಸರ್ಕಾರದ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು, ಅಧಿಕಾರಿಗಳ ಸಮ್ಮುಖದಲ್ಲೇ ವಿತರಣೆ ಮಾಡಿದ ಹಕ್ಕುಪತ್ರಕ್ಕೆ ಬೆಲೆ ಇಲ್ಲದಂತೆ ಮಾಡಿದ್ದಾರೆ ಎಂದರು.

ವಿಳಂಬ ನೀತಿ ಖಂಡಿಸಿ ತಾಲ್ಲೂಕು ಪಂಚಾಯಿತಿ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದ್ದರ ಪರಿಣಾಮ ಅಧಿಕಾರಿಗಳು ಕೆಲವು ದಾಖಲಾತಿಗಳನ್ನು ಸಲ್ಲಿಸಲು ಹೇಳಿದ್ದರು. ಅವರು ಹೇಳಿದ ಎಲ್ಲಾ ಕಾಗದ ಪತ್ರಗಳನ್ನು ಸಲ್ಲಿಸಲು ಫಲಾನುಭವಿಗಳು ಸಿದ್ಧರಿದ್ದಾರೆ. ಆದರೆ ಮೂರು ತಲೆಮಾರಿನ ವಂಶವೃಕ್ಷ ನೀಡುವಂತೆ ಕೇಳಿದ್ದಾರೆ. ಹಕ್ಕುಪತ್ರ ಅನ್ವಯ ಖಾತೆ ಮಾಡಿಕೊಡಲು ವಂಶವೃಕ್ಷ ಬೇಕಿಲ್ಲವಾದರೂ ಅಧಿಕಾರಿಗಳು ಅನಗತ್ಯ ಕಾನೂನು ರೂಪಿಸುತ್ತಿದ್ದಾರೆ.

# ಹೊರ ರಾಜ್ಯದ ಮಕ್ಕಳ ಪಾಲಿಗೆ ಆಶಾಕಿರಣ ಶಿಕ್ಷಕಿ ಪ್ರಮಿಳಾ

## ಚಿಂದಿ ಆಯುವ ಮಕ್ಕಳಿಗೆ ಕನ್ನಡ ಕಲಿಕೆ | ಉಜ್ವಲ ಭವಿಷ್ಯ ನಿರ್ಮಾಣಕ್ಕೆ ಪಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೂರದ ಬಿಹಾರದ ವಿದ್ಯಾರ್ಥಿಗಳು ತಾಲ್ಲೂಕಿನ ಸರ್ಕಾರಿ ಶಾಲೆಯೊಂದರಲ್ಲಿ ವ್ಯಾಸಂಗ ಮಾಡುತ್ತಿರುವುದು ಮಾತ್ರವಲ್ಲದೆ ಸುಲಲಿತವಾಗಿ ಕನ್ನಡ ಕಲಿತಿದ್ದು, ಶಿಕ್ಷಕಿಯೊಬ್ಬರ ಸತತ ಪ್ರಯತ್ನ ಹಾಗು ಕಾಳಜಿ ಈ ರೀತಿಯ ಬದಲಾವಣೆಗೆ ಕಾರಣವಾಗಿದೆ.

ತಾಲ್ಲೂಕಿನ ಪಿರುಮನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂತಹದೊಂದು ಚಮತ್ಕಾರ ನಡೆಯುತ್ತಿದ್ದು ಚಿಂದಿ ಆಯುವ ಕೆಲಸಕ್ಕೆ ಬಿಹಾರದಿಂದ ಬಂದಿರುವ ಮಕ್ಕಳಿಗೆ ವಿದ್ಯಾ ದೇವತೆಯಾಗಿದ್ದಾರೆ ಶಿಕ್ಷಕಿ ಪ್ರಮೀಳಾ. ಸರ್ಕಾರಿ ಸಂಬಳ ಪಡೆದು ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿರುವ ಎಲ್ಲಾ ಅವಕಾಶಗಳಿದ್ದರೂ ಪ್ರಮೀಳಾ ಅವರು ಕಷ್ಟದ ಕೆಲವು ಜವಾಬ್ದಾರಿಗಳನ್ನು ವಹಿಸಿಕೊಂಡಿದ್ದಾರೆ. ಪ್ರಸ್ತುತ ಬೇಸಿಗೆ ರಜೆಯಿಂದ ತರಗತಿಗಳು ನಡೆಯುತ್ತಿಲ್ಲವಾದರೂ ಮಕ್ಕಳ ಸಂಪೂರ್ಣ ನಿಗಾ ಅವರೇ ವಹಿಸಿಕೊಂಡಿದ್ದಾರೆ.

ಮಕ್ಕಳ ಭವಿಷ್ಯ ಕಂಡು ಮರುಗಿದ ಮನ: 19 ವರ್ಷಗಳಿಂದ ಪ್ರಮೀಳಾ ಅವರು ಪಿರುಮನಹಳ್ಳಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಾಲ್ಕೈದು ವರ್ಷಗಳ ಹಿಂದೆ ಶಾಲೆಗೆ ಹೋಗುತ್ತಿದ್ದಾಗ ಮುಗ್ಧ ಮಕ್ಕಳು ಚನ್ನಪಟ್ಟಣದ ಖಾಲಿ ಪ್ರದೇಶದಲ್ಲಿ ಬಿಸಿಲು, ಗಾಳಿಗೆ ಮೈಯೊಡ್ಡಿ ಆಟವಾಡುತ್ತಾ, ತಂದೆ-ತಾಯಿಯೊಂದಿಗೆ ಕೆಲಸ ಮಾಡಿಕೊಂಡಿರುವುದನ್ನು ನೋಡಿದ ಪ್ರಮೀಳಾ ಅವರು ಹತ್ತಿರಕ್ಕೆ ಹೋಗಿ ವಿಚಾರಿಸಿದ್ದಾರೆ. ಮಕ್ಕಳ ಪೋಷಕರಿಗೆ ಕನ್ನಡ ಬರುವುದಿಲ್ಲ, ಶಿಕ್ಷಕಿಗೆ ಹಿಂದಿ ಗೊತ್ತಿಲ್ಲ. ಮಾರನೇ ದಿನ ಹಿಂದಿ ಹಾಗು ಕನ್ನಡ ಭಾಷೆ ಬಲ್ಲ ವ್ಯಕ್ತಿಯೊಂದಿಗೆ ಹೋದಾಗ ಅವರ ಕಷ್ಟ ಸುಖಗಳನ್ನು ಆಲಿಸಿದ್ದಾರೆ. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ಇಲ್ಲವಾದರೆ ಅವರು ನಿಮ್ಮಂತೆ ಚಿಂದಿ ಆಯಬೇಕಾಗುತ್ತದೆಂದು ತಿಳಿ ಹೇಳಿದಾಗ ಪೋಷಕರು ಶಾಲೆಗೆ ಕಳುಹಿಸಲು ಒಪ್ಪಿದರು. ಹತ್ತಿರದ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬಹುದಿತ್ತಾದರೂ ಪೋಷಕರ ಹಾಗೂ ಮಕ್ಕಳ ಅಗತ್ಯ ದಾಖಲೆಗಳಿಲ್ಲದ ಕಾರಣ ಪ್ರಮೀಳಾ ಅವರೇ ಮುತುವರ್ಜಿ ವಹಿಸಿ ತಮ್ಮ ಶಾಲೆಗೆ ಸೇರಿಸಿಕೊಂಡಿದ್ದಾರೆ.

ಶಾಲೆ ತಲುಪಲು ಸಮಯಕ್ಕೆ ಸರಿಯಾಗಿ ಸಾರಿಗೆ ಬಸ್‌ನ ವ್ಯವಸ್ಥೆಯಿಲ್ಲದ ಕಾರಣ ಅವರು ಆಟೋದಲ್ಲಿ ತೆರಳುತ್ತಾರೆ. ಆರಂಭದಲ್ಲಿ ಎರಡು ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಂಡು ಹಿಂದಿ ಮಕ್ಕಳಿಗೆ ಕನ್ನಡ ಕಲಿಸಲು ಆರಂಭಿಸಿದ ಪ್ರಮೀಳಾ ಅವರು ಸದ್ಯ 8 ಮಕ್ಕಳಿಗೆ ಆಸರೆಯಾಗಿದ್ದಾರೆ.

ಆರಂಭದಲ್ಲಿ ಸ್ಥಳೀಯ ಮಕ್ಕಳೊಂದಿಗೆ ಬಿಹಾರದ ವಿದ್ಯಾರ್ಥಿಗಳ ಹೊಂದಾಣಿಕೆ ಕಷ್ಟವಾಯಿತಾದರೂ ಪ್ರಮೀಳಾ ಅವರು ಎಲ್ಲವನ್ನೂ ನಿಬಾಯಿಸಿದ್ದಾರೆ. ಮೊದಲು ಗ್ರಾಮಸ್ಥರು ಸಹ ಈ ರಿಸ್ಕ್ ನಿಮಗೆ ಬೇಕಾ ಎಂದು ಪ್ರಶ್ನಿಸಿದ್ದರಂತೆ. ಆದರೆ ಹೀಗೆ ಬಿಟ್ಟರೆ ಈ ಮಕ್ಕಳು ಚಿಂದಿ ಆಯುತ್ತಾರೆ ಅಥವಾ ಅಜ್ಞಾನದಿಂದ ತಪ್ಪು ಮಾರ್ಗ ತುಳಿಯುವ ಸಾಧ್ಯತೆಯಿದೆ. ಪ್ರಜ್ಞಾವಂತರಾಗಿರುವ ನಾವು ಕೈಲಾದ ಸಹಾಯ ಮಾಡೋಣವೆಂದು ಎಲ್ಲರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.



> ಪ್ರತಿ ಮಗುವಿನಲ್ಲೂ ವಿಶೇಷ ಪ್ರತಿಭೆ ಇದೆ. ಡ್ರಾಯಿಂಗ್, ವ್ಯಾಸಂಗ, ಸಂಗೀತ ಹೀಗೆ ಎಲ್ಲದರಲ್ಲೂ ವಿಶೇಷ ಆಸಕ್ತಿ ಹೊಂದಿದ್ದಾರೆ. ಹಾಗೆಯೇ ಬಿಟ್ಟಿದ್ದರೆ ಮಕ್ಕಳ ಭವಿಷ್ಯವೇ ಹಾಳಾಗುತ್ತಿತ್ತು. ಈ ಕೆಲಸಕ್ಕೆ ಕೈಹಾಕಿದಾಗ ರಿಸ್ಕ್ ಎನಿಸಿತಾದರೂ ಈಗ ಎಲ್ಲವೂ ಸುಲಭವಾಗಿದೆ. ಮೊದಲು ಮಕ್ಕಳ ಪೋಷಕರು ನನ್ನನ್ನು ಕಂಡು ಹೆದರಿದ್ದರು. ಈಗ ಕುಟುಂಬದ ಸದಸ್ಯೆಯಂತೆ ಭಾವಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಈ ಕೆಲಸ ಸಾರ್ಥಕತೆ ತಂದಿದೆ.
>
> **- ಪ್ರಮೀಳಾ, ಶಿಕ್ಷಕಿ**

### ಕನ್ನಡದಲ್ಲಿ ಮಕ್ಕಳ ಪಾಂಡಿತ್ಯ

ಪ್ರಸ್ತುತ 6 ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು ಎಲ್ಲರೂ ಸುಲಲಿತವಾಗಿ ಕನ್ನಡ ಮಾತನಾಡುತ್ತಾರೆ. ವಚನಗಳ ಓದುವಿಕೆ, ಕಥೆ, ಕವನ ಹೇಳುವುದು. ಪ್ರಾರ್ಥನಾ ಗೀತೆಗೆ ಬಿಹಾರದ ಮಕ್ಕಳೇ ಮೊದಲ ಸಾಲಿನಲ್ಲಿರುತ್ತಾರೆ. ನಮ್ಮ ಅಪ್ಪ-ಅಮ್ಮ ಚಿಂದಿ ಆಯುತ್ತಾರೆ, ನಾವು ಸೈನಿಕರಾಗುತ್ತೇವೆ, ವೈದ್ಯ, ಶಿಕ್ಷಕ ಹೀಗೆ ತಮ್ಮದೇಯಾದ ಕನಸುಗಳನ್ನು ಬಿಚ್ಚಿಡುತ್ತಾರೆ. ಆರ್ಥಿಕವಾಗಿ ತೀರಾ ದುರ್ಬಲರಾಗಿರುವ ವಿದ್ಯಾರ್ಥಿಗಳಿಗೆ ಗ್ರಾಮಸ್ಥರೇ ಯುನಿಫಾರ್ಮ್, ನೋಟ್‌ಬುಕ್ ಸೇರಿದಂತೆ ಅಗತ್ಯ ಸೌಕರ್ಯ ಕಲ್ಪಿಸುತ್ತಿದ್ದಾರೆ. ತಿಂಗಳಿಗೆ 8 ಸಾವಿರ ರೂ. ಆಟೋ ಬಾಡಿಗೆಯನ್ನು ಶಿಕ್ಷಕಿ ಪ್ರಮೀಳಾ ಭರಿಸುತ್ತಿದ್ದಾರೆ. ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದರೆ ಇಂತಹ ಸಕಾರಾತ್ಮಕ ಬದಲಾವಣೆಗಳು ಸಾಧ್ಯ ಎಂಬುದಕ್ಕೆ ಶಿಕ್ಷಕಿ ಪ್ರಮೀಳಾ ಅವರು ಸಾಕ್ಷಿಯಾಗಿದ್ದಾರೆ.


# ರಸ್ತೆಯಲ್ಲಿ ಕಾಡಾನೆ ಭೀಮ ಸಂಚಾರ: ಜನರಲ್ಲಿ ಆತಂಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಬಿಕ್ಕೋಡು ಗ್ರಾಮದಲ್ಲಿ ಬೆಳ್ಳಂ ಬೆಳಿಗ್ಗೆ ರಸ್ತೆಯಲ್ಲಿ ಕಾಡಾನೆ ಭೀಮ ಕಾಣಿಸಿಕೊಂಡು ಕೆಲ ಕಾಲ ಭಯದ ವಾತಾವರಣ ನಿರ್ಮಾಣಗೊಂಡಿತ್ತು. ಹಲವು ದಿನಗಳಿಂದ ತೋಟಗಳಲ್ಲಿ ಬೀಡು ಬಿಟ್ಟಿದ್ದ ಭೀಮ ಮತ್ತೆ ಜನವಸತಿ ಪ್ರದೇಶದಲ್ಲಿ ಕಾಣಿಸಿಕೊಂಡಿದೆ.

ಕಾಡಾನೆ ನಿಧಾನವಾಗಿ ರಸ್ತೆಯಲ್ಲಿ ನಡೆದುಕೊಂಡು ಬರುವುದನ್ನು ಕಂಡ ಕೂಡಲೇ ವಾಹನ ಸವಾರರು ವಾಹನಗಳನ್ನು ನಿಲ್ಲಿಸಿಕೊಂಡು ನಿಂತಿದ್ದಾರೆ. ಜನರನ್ನು ಕಂಡ ಭೀಮ ರಸ್ತೆ ಬದಿಯಿದ್ದ ಕಾಫಿ ಎಸ್ಟೇಟ್‌ನ ಒಳಗೆ ಹೋಗಲು ಯತ್ನಿಸಿದೆ. ಎಸ್ಟೇಟ್‌ನ ಗೇಟ್ ಹಾಕಿದ್ದು ಇದನ್ನು ಕಂಡ ಭೀಮ ಕಾಲು ಹಾಗು ಸೊಂಡಿಲಿನಿಂದ ಗೇಟ್ ತಳ್ಳಿ ಕಾಫಿ ತೋಟದೊಳಗೆ ಹೋಗಿದೆ.

ಕಾಡಾನೆ ಭೀಮ ಗೇಟ್ ತೆಗೆದು ಕಾಫಿ ತೋಟದ ಒಳಗೆ ಹೋಗುವ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಕಾಫಿ ತೋಟದೊಳಗೆ ಹೋದ ಕಾಡಾನೆ ಸಣ್ಣ ಮರ ಮುರಿದು ತಿನ್ನುತ್ತಾ ನಿಂತಿದೆ. ಭೀಮಾ ಸೌಮ್ಯ ಸ್ವಭಾವದ




ಗುಣ ಹೊಂದಿರುವುದರಿಂದ ಸ್ಥಳೀಯರು ಹತ್ತಿರದಿಂದಲೇ ನಿಂತು ವೀಕ್ಷಿಸಿದರಲ್ಲದೆ, ಮೊಬೈಲ್‌ಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದಾರೆ.

ಹಲವೆಡೆ ಕಾಡಾನೆ ಗುಂಪು: ಬೇಲೂರು ತಾಲ್ಲೂಕಿನ ಹರೀಶ್ ಅವರ ತೋಟ ಕಣದೂರು, ತಿಮ್ಮೇಗೌಡರ ತೋಟ ಜಾಕನಹಳ್ಳಿ, ಕೃಷ್ಣೆಗೌಡರ ತೋಟ, ಲಾಯರ್ ಪ್ರಭಾಕರ್ ಅವರ ತೋಟ ಚೀಕನಹಳ್ಳಿ, ನಿಂಗರಾಜು ಅವರ ಕಾಡು ಬಾಲಗುಳಿ ನಿಯರ್ ಐಬಿಸಿ ಎಸ್ಟೇಟ್ ಇಂದ್ರಗಿರಿ ಎಸ್ಟೇಟ್, ಬೇಡಿ ಎಸ್ಟೇಟ್ ಕೂಗೋಡು, ನೇರಳಮಕ್ಕಿ ಗ್ರಾಮದ ಕಾನಳ್ಳಿ ಫಾರೆಸ್ಟ್ ಮತ್ತು ತಾರಾನಾಥ್ ಅವರ ತೋಟ, ಅಶೋಕ್ ಗೌಡರ ತೋಟ ಮತ್ತು ನಂದಿ ಎಸ್ಟೇಟ್ ಚೀಕನಹಳ್ಳಿ ಸುತ್ತಮುತ್ತ ಕಾಡಾನೆಗಳು ಕಂಡುಬಂದಿರುತ್ತವೆ.

ಅದೇ ರೀತಿ ಸಕಲೇಶಪುರ ತಾಲ್ಲೂಕಿನ ಗುಡ್ ಬೆಟ್ಟ ಎಸ್ಟೇಟ್ ಕೆಸಗುಲಿ ಮತ್ತು ಪಿಂಟೋ ಎಸ್ಟೇಟ್, ಇಬ್ಬಡಿ ರಾಮಚಂದ್ರ ಅವರ ತೋಟ ಕಲ್ಗಂಡಿ, ಗುಡ್ ಬೆಟ್ಟ ಎಸ್ಟೇಟ್ ಉದೇವರ, ನಜೀರ್ ಸಾಬ್ರುತೋಟ ಮತ್ತು ಯೂನಸ್ ಅವರ ತೋಟ ಹುಲ್ಲೇ ಮಕ್ಕಿ ಸುತ್ತಮುತ್ತ ಕಾಡಾನೆಗಳು ಕಂಡುಬಂದಿವೆ.

ಹೆತ್ತೂರು ಮತ್ತು ಯಸಳೂರು ಹೋಬಳಿಯ ಕರಡಿಗಾಲ ಮತ್ತು ಚಿನ್ನಹಳ್ಳಿ ಗ್ರಾಮದ ಸಿರಿಮನೆ ಮತ್ತು ಭೂತಾರ್ ಉಡುವೆ, ಹಾಡ್ಲಾಹಳ್ಳಿ ಗ್ರಾಮದ ಬಸರಿ ಹಡ್ಲು, ಜೆಡಿಗದ್ದೆ, ಐಗೂರು ನಿರ್ವಾ ಎಸ್ಟೇಟ್ (ರಾಟೆಮನೆಕೆರೆ ), ಹಾಡ್ಲುಗದ್ದೆ ಮತ್ತು ಬಿಸ್ಲೆ ಗ್ರಾಮದ ತಾರೆಕೋಲು, ನಾಗೇನಹಳ್ಳಿ ಗ್ರಾಮದ ಕಾರೆ ಕೊಪ್ಪಲು ಬೆಟ್ಟ, ಬಾಚಿಹಳ್ಳಿ ಗ್ರಾಮದ ಬಿರ್ಲುದಿಣ್ಣೆ, ತಂಬಲಗೇರಿ ಗ್ರಾಮದ ಎಳರ್ ಗದ್ದೆ ಸುತ್ತಮುತ್ತ ಕಾಡಾನೆಗಳು ಬೀಡುಬಿಟ್ಟಿವೆ.

# ಪುಸ್ತಕಗಳು ಸ್ನೇಹಿತರಾದರೆ ಜ್ಞಾನಿಯಾಗಲು ಸಾಧ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪುಸ್ತಕಗಳು ಉತ್ತಮ ಸ್ನೇಹಿತರಾದಾಗ ಮಾತ್ರ ಜೀವನದಲ್ಲಿ ಜ್ಞಾನಿಗಳಾಗಲು ಸಾಧ್ಯ ಎಂದು ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಗ್ರಂಥಪಾಲಕ ಡಾ. ಜಿ.ಬಿ. ನಾಗರಾಜು ಅಭಿಪ್ರಾಯಪಟ್ಟರು.

ನಗರದ ಆರ್.ಸಿ. ರಸ್ತೆಯ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ ಹಾಗೂ ಗ್ರಂಥಾಲಯ ವಿಭಾಗದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಯುಗದಲ್ಲಿ ಗ್ರಂಥಾಲಯದ ಪಾತ್ರ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಾಗೂ ಪುಸ್ತಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ವ್ಯಕ್ತಿಗೆ ಮಾಹಿತಿಯು ತುಂಬಾ ಮುಖ್ಯವಾಗಿದ್ದು, ಒಂದಿಲ್ಲೊಂದು ಮಾಹಿತಿಯನ್ನು ಪಡೆಯಲು ನಾವುಗಳು ಪುಸ್ತಕಗಳನ್ನು ಅವಲಂಬಿಸಬೇಕಾಗಿರುತ್ತದೆ. ಗ್ರಂಥಾಲಯವನ್ನು ಶಕ್ತಿ ಕೇಂದ್ರ ಎಂದು ಕರೆಯುತ್ತೇವೆ ಮತ್ತು ಎಲ್ಲ ಚಟುವಟಿಕೆಗಳ ಕೇಂದ್ರ ಸ್ಥಾನ ಎಂದರು ತಪ್ಪಾಗದು. ಏ.23 ಅನ್ನು ಅಂತಾರಾಷ್ಟ್ರೀಯ ಪುಸ್ತಕ ದಿನ ಎಂದು ಕರೆಯಲಾಗುತ್ತದೆ. ಯುವಕರು ಬದುಕಲ್ಲಿ ಓದುವ ಛಲವನ್ನು ಬೆಳೆಸಿಕೊಂಡು ಓದುವ ಹವ್ಯಾಸ ಬೆಳೆಸಿಕೊಂಡರೆ ಗ್ರಂಥಾಲಯ ಆ ಜೀವನದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಗ್ರಂಥಾಲಯದಲ್ಲಿ ನಾವು ಪುಸ್ತಕವನ್ನು ಓದುತ್ತಿದ್ದರೆ ನಮಗೂ ಮತ್ತು ಪುಸ್ತಕಗಳಿಗೂ ಅಭಿನಭಾವ ಸಂಬಂಧ ಬೆಳೆಯುತ್ತದೆ. ಪುಸ್ತಕವನ್ನು ತಲೆ ಬಗ್ಗಿಸಿ ನೋಡಿದರೆ ಅದು ನಮ್ಮನ್ನು ತಲೆ ಎತ್ತಿ ನಡೆಯುವಂತೆ ಮಾಡುತ್ತದೆ. ಎಲ್ಲರೂ ಗ್ರಂಥಾಲಯವನ್ನು ಬಳಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳ ಜ್ಞಾನವನ್ನು ತಿಳಿದುಕೊಳ್ಳಿ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಗ್ರಂಥಾಲಯ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಅತಿ ಮುಖ್ಯವಾದದ್ದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಬರೆದರೆ ಅದು ನಮಗೆ ಹೆಚ್ಚಿನ ಜ್ಞಾನವನ್ನು ತಿಳಿಸುತ್ತದೆ ಮತ್ತು ಯಾವ ಯಾವ ಪುಸ್ತಕವನ್ನು ಓದಬೇಕು ಎಂದು ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳು ಎಲ್ಲರೂ ಸ್ಪರ್ಧಾತ್ಮಕ ಪರೀಕ್ಷೆಗಳ ಜ್ಞಾನವನ್ನು ಪಡೆದುಕೊಂಡರೆ ಉನ್ನತ ಸ್ಥಾನಕ್ಕೆ ಬೆಳೆಯಬಹುದು ಎಂದು ಹೇಳಿದರು.

ಕಾಲೇಜಿನ ಐಕ್ಯೂಎಸಿ ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಗ್ರಂಥಪಾಲಕ ಡಾ.ಬಿ.ಪ್ರದೀಪ್ ಕುಮಾರ್ ಹಾಗೂ ಇತರರು ಹಾಜರಿದ್ದರು.

# ಬೇಸಿಗೆ ಬಿಸಿಲ ತಾಪ ತಣಿಸಲು ಆರೋಗ್ಯ ಇಲಾಖೆ ಸಲಹೆ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಈ ಬಾರಿ ಬೇಸಿಗೆ ಬಿರು ಬಿಸಿಲು ಅಧಿಕವಾಗಿದ್ದು, ಸುಡು ಬಿಸಿಲಿನಿಂದ ರಕ್ಷಣೆಗಾಗಿ ಆರೋಗ್ಯ ಇಲಾಖೆ ಹಲವು ಕ್ರಮ ಅನುಸರಿಸುವಂತೆ ಸಲಹೆ ನೀಡಿದೆ.

ವಯೋವೃದ್ದರು, ಮಕ್ಕಳು ಮತ್ತು ಅಶಕ್ತರು ಬಿಸಿಲಿನ ಸಮಯದಲ್ಲಿ ಹೆಚ್ಚು ನಿಗಾ ವಹಿಸಬೇಕು. ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ಹೆಚ್ಚಿನ ಸಮಯ ನೇರ ಬಿಸಿಲಿನಲ್ಲಿ ಹೊರಗೆ ಓಡಾಟ ನಡೆಸಬಾರದು. ನೀರನ್ನು ಹೆಚ್ಚಾಗಿ ಕುಡಿಯಬೇಕು. ಎಳನೀರು, ಮಜ್ಜಿಗೆ, ಹಣ್ಣಿನ ರಸವನ್ನು ಸೇವಿಸುವುದು ಒಳಿತು. ಉಷ್ಣಾಘಾತ ಇದ್ದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು ಎಂದು ಆರೋಗ್ಯ ಇಲಾಖೆ ನಿರ್ದೇಶನ ನೀಡಿದೆ.

ಬಿಸಿಲಿನ ಸಮಯದಲ್ಲಿ ದೇಹದಲ್ಲಿ ನೀರಿನ ಅಂಶ ಕಡಿಮೆಯಾದಲ್ಲಿ ಸನ್‌ಸ್ಟ್ರೋಕ್ ಸಾಧ್ಯತೆ ಅಧಿಕವಾಗಿರುತ್ತದೆ. ಜಾಗತಿಕ ತಾಪಮಾನದಲ್ಲಿ 1 ಅಂಶ ಅಧಿಕವಾದರೂ ಬಿಸಿಗಾಳಿಯ ಅವಧಿ ಸಹ ಹೆಚ್ಚಾಗುತ್ತದೆ.

ಮಧ್ಯಾಹ್ನದ ಬಿಸಿಲಿನ ಸಮಯ



ಶ್ರಮದಾಯಕ ಕೆಲಸಗಳು ಬೇಡ. ಹೆಚ್ಚಾಗಿ ಶುದ್ದ ನೀರನ್ನು ಕುಡಿಯಿರಿ. ಸಕ್ಕರೆಯುಕ್ತ ಪಾನಿಯ, ಕಾರ್ಬೋನೇಟೆಡ್ ಪಾನಿಯಗಳನ್ನು ಸೇವಿಸಬೇಡಿ. ಇದರಿಂದ ನಿರ್ಜಲೀಕರಣ ಉಂಟಾಗುತ್ತದೆ. ಬಿಳಿ ಅಥವಾ ತಿಳಿ ಬಣ್ಣದ ತೆಳುವಾದ ಹತ್ತಿ ಬಟ್ಟೆಗಳನ್ನು ಧರಿಸಿ. ಹೊರಾಂಗಣದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ಇದ್ದಲ್ಲಿ, ಆಗಾಗ್ಗೆ ವಿಶ್ರಾಂತಿ ಪಡೆಯಿರಿ. ಛತ್ರಿ, ಟೋಪಿ ಧರಿಸಿ ನೆತ್ತಿ ನೇರವಾಗಿ ಬಿಸಿಲಿನಿಂದ ಸುಡುವುದನ್ನು ಅಲ್ಪ ಮಟ್ಟಿಗೆ ತಡೆಯಬಹುದು. ಕಣ್ಣಿಗೆ ಕಪ್ಪು ಗಾಜಿನ ಕನ್ನಡಕ ಧರಿಸಿ.

> ಬಿಸಿಲಿನ ತಾಪಮಾನ ಅಧಿಕವಾಗಿದೆ. ಜನರು ಅಗತ್ಯ ಸುರಕ್ಷತಾ ಕ್ರಮ ಅನುಸರಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೂರ್ಯಾಘಾತಕ್ಕೊಳಗಾದವರಿಗೆ ಚಿಕಿತ್ಸೆ ನೀಡಲಾಗುವುದು.
>
> **- ಡಾ.ಎಚ್.ಎನ್.ರಾಜೇಶ್, ತಾಲೂಕು ಆರೋಗ್ಯಾಧಿಕಾರಿ ಹೊಳೆನರಸೀಪುರ**

ಬಿಸಿಲಿನಿಂದ ಸೂರ್ಯಾಘಾತಕ್ಕೊಳಗಾದ ವ್ಯಕ್ತಿಯನ್ನು ತಂಪಾದ ಸ್ಥಳದಲ್ಲಿ ನೆಲದ ಮೇಲೆ ಮಲಗಿಸಬೇಕು. ಒದ್ದೆ ಬಟ್ಟೆಯಿಂದ ವ್ಯಕ್ತಿಯ ಮೈಯನ್ನು ಒರೆಸಿ. ನೀರನ್ನು ನಿದಾನವಾಗಿ ಕುಡಿಸಬೇಕು. ಎಚ್ಚರಗೊಂಡ ನಂತರ ತಂಪಾದ ಪಾನಿಯ ಕುಡಿಸಬೇಕು.

ಆಹಾರ: ಬಿಸಿಲಿನ ಬೇಸಿಗೆ ದಿನಗಳಲ್ಲಿ ಆದಷ್ಟೂ ರಾಗಿ, ಬಾರ್ಲಿ, ಕುಸುಬಿದ ಅಕ್ಕಿ ಗಂಜಿಯನ್ನು ಸೇವಿಸಬೇಕು. ಮಣ್ಣಿನ ಮಡಿಕೆಯಲ್ಲಿ ಸಂಗ್ರಹಿಸಿದ ಶುದ್ಧ ನೀರನ್ನು ಸೇವಿಸುವುದು ಒಳ್ಳೆಯದು. ದ್ರವಾಂಶ ಹೆಚ್ಚಿರುವ ಕಲ್ಲಂಗಡಿ, ಕರ್ಬೂಜ, ಎಳನೀರು, ಕಿತ್ತಳೆ , ಕರ್ಜೂರ, ದಾಳಿಂಬೆ, ಸೌತೇಕಾಯಿ, ಹೀರೇಕಾಯಿ ಅಂತವುಗಳನ್ನು ಸವಿಯಿರಿ. ಇದರಿಂದ ಪೋಷಕಾಂಶವೂ ಹೆಚ್ಚುವ ಜತೆಗೆ ರೋಗ ನಿರೋಧಕ ಶಕ್ತಿ ಹೆಚ್ಚಲು ದೇಹಕ್ಕೆ ಸಹಕಾರಿಯಾಗುತ್ತದೆ. ಲಾವಂಚ, ಸೊಗದೆ ಬೇರು, ಚಂದನ, ರಕ್ತಚಂದನ ಮಿಶ್ರಿತ ನೀರು ಸೇವನೆ ಹಿತಕಾರಿ. ಕಾಫಿ, ಚಹ ಅಧಿಕ ಸೇವನೆ ತೊರೆಯಿರಿ. ಅತಿಯಾಗಿ ಉಪ್ಪು, ಖಾರದ ಮಸಾಲೆಗಳನ್ನು ಆಹಾರದಲ್ಲಿ ಸೇರಿಸಿ ತಿನ್ನದಿರಿ. ಗಿಡ. ಮರಗಳ ನೆರಳಿನಲ್ಲಿ ಬಿಸಿಲಿನ ವೇಳೆ ವಿಶ್ರಾಂತಿ ಪಡೆಯಿರಿ. ಮನೆಯ ಛಾವಣಿ ಅಥವಾ ತೆರೆದ ಸ್ಥಳಗಳಲ್ಲಿ ರಾತ್ರಿ ಮಲಗುವುದು ಒಳ್ಳೆಯದು. ಆರೋಗ್ಯ ಇಲಾಖೆ ಪ್ರತಿ ಆರೋಗ್ಯ ಸಮೂದಾಯ ಕೇಂದ್ರಗಳು, ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೂರ್ಯಾಘತದಿಂದ ಬಳಲಿಕೆಯಾದಲ್ಲಿ ತುರ್ತು ಚಿಕಿತ್ಸೆ ಗೆ ಸಿದ್ದವಾಗಿರಿಸಲಾಗಿದೆ.

# ಮೇ 1ಕ್ಕೆ ಲಕ್ಷ್ಮಿ ಚನ್ನಕೇಶವ ಸ್ವಾಮಿ ದಿವ್ಯ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಲಕ್ಷ್ಮೀ ಚನ್ನಕೇಶವ ಸ್ವಾಮಿ ಜಾತ್ರಾ ಮಹೋತ್ಸವ ಏ. 24ರಿಂದ ಮೇ 10ರ ವರೆಗೆ ನೆರವೇರಲಿದೆ.

ಮೇ 1ರಂದು ದಿವ್ಯ ರಥೋತ್ಸವ ನಡೆಯಲಿದೆ. ಏ. 24ರ ಶುಕ್ರವಾರ ರಾತ್ರಿ 8 ಗಂಟೆಗೆ ದೇವತಾರಾಧನೆ, ವಿಶ್ವಕ್ಸೇನಾರಾಧನಾ ಮೃತ್ತಿಕಾ ಸಂಗ್ರಹಣ, ಪೂರ್ವಕ ಅಂಕುರಾರ್ಪಣದೊಂದಿಗೆ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಲಾಗುವುದು. ಪ್ರತಿದಿನವೂ ವಿವಿಧ ಧಾರ್ಮಿಕ ವಿಧಿ ವಿಧಾನ ನೆರವೇರಲಿವೆ. ಪಂಚಾಮೃತ ಅಭಿಷೇಕ, ರಕ್ಷಾ ಬಂಧನ, ಯಾಗ ಶಾಲಾ ಪ್ರವೇಶ, ಧವನಮಂಟಪೋತ್ಸವ, ಶ್ರೀಯವರಿಗೆ ಶೇಷ ವಾಹನೋತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಚಿಕ್ಕಗರುಡೋತ್ಸವ ನಡೆಯಲಿದೆ.

ಏ. 30ರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರ ವರೆಗೆ ಕಲ್ಯಾಣೋತ್ಸವ, ಸಂಜೆ ಸಂಜನ ಗರುಡೋತ್ಸವ, ಗಜೇಂದ್ರ ಮೋಕ್ಷೋತ್ಸವ ನಡೆಯಲಿದೆ. ಮೇ 1ರ ಶುಕ್ರವಾರ ಮಧ್ಯಾಹ್ನ 12.30ರಿಂದ 1 ಗಂಟೆ ವೇಳೆಯಲ್ಲಿ ಸಲ್ಲುವ ಶುಭ ಕುಳೀರ ಲಗ್ನದಲ್ಲಿ ದಿವ್ಯ ಮಹಾರೋತ್ಸವ ಜರುಗಲಿದ್ದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ್ ಸೇರಿ ಇತರರು ಪಾಲ್ಗೊಳ್ಳಲಿದ್ದಾರೆ.

# ಸಮಾಜ ಸೇವೆಯಲ್ಲಿ ತೊಡಗಲು ರೋಟರಿ ಸೇರಿಕೊಳ್ಳಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾಜ ಸೇವೆಗೆ ಯುವ ಪೀಳಿಗೆಯನ್ನು ತೊಡಗಿಸಿಕೊಳ್ಳುವಂತೆ ಮಾಡಲು ರೋಟರಿ ಸಂಸ್ಥೆ ವತಿಯಿಂದ ಕಾಲೇಜು ಹಂತದಲ್ಲಿ ರೋಟ್ರ್ಯಾಕ್ಟ್ ಕ್ಲಬ್‌ಗಳನ್ನು ಆರಂಭಿಸಲಾಗುತ್ತಿದ್ದು, ಆ ಮೂಲಕ ಯುವ ನಾಯಕರನ್ನು ಸಮಾಜಕ್ಕೆ ನೀಡು ಕಾರ್ಯ ಮಾಡಲಾಗುತ್ತಿದೆ ಎಂದು ರೋಟರಿ 3182 ಜಿಲ್ಲಾ ಗವರ್ನರ್ ಕೆ. ಪಾಲಾಕ್ಷ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಹಾಗೂ ಕಾಲೇಜಿನ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ ನಡೆದ ರೋಟ್ರ್ಯಾಕ್ಟ್ ಕ್ಲಬ್‌ನ ನೂತನ ಅಧ್ಯಕ್ಷರು ಹಾಗೂ ಕಾರ್ಯದರ್ಶಿ, ಖಜಾಂಚಿ ಮತ್ತು ಸದಸ್ಯರ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಅವರು, ಶಾಲಾ-ಕಾಲೇಜು ಹಂತದಲ್ಲಿ ಮಕ್ಕಳನ್ನು ಸಾಮಾಜಿಕ ಸೇವೆಯಲ್ಲಿ ತೊಡಗುವಂತೆ ಮಾಡಲು ರೋಟರಿ ರೋಟ್ರ್ಯಾಕ್ಟ್ ಕ್ಲಬ್‌ಗಳನ್ನು ಆರಂಭಿಸಲಾಗಿದ್ದು, ಪದವಿ ಹಂತದಲ್ಲಿ ಯುವಕರು ತಮ್ಮ ಪಠ್ಯದೊಂದಿಗೆ ರೋಟರಿಯಲ್ಲಿ ಕಾರ್ಯನಿರ್ವಹಿಸಿದರೆ ಜೀವನದಲ್ಲಿ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಲು ಸಹಕಾರಿಯಾಗಲಿದೆ. ಕಾಲೇಜಿನ ವಿದ್ಯಾಭ್ಯಾಸದ ಅವಧಿಯಲ್ಲಿ ಸಾಮಾಜಿಕ ಸೇವೆ, ಹೊಣೆಗಾರಿಕೆ, ಮಾತುಗಾರಿಕೆ ಸೇರಿದಂತೆ ಜವಬ್ದಾರಿಯುತ ಹುದ್ದೆಗಳ ನಿರ್ವಹಣೆಯ ಬಗ್ಗೆ ತಿಳಿಯಲು ಸಹಕಾರಿಯಾಗಲಿದೆ. ರೋಟರಿ ಸಂಸ್ಥೆ ಇಂದು ವಿಶ್ವದ 220 ರಾಷ್ಟ್ರಗಳಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದು, 12.5 ಲಕ್ಷ ರೋಟರಿ ಸದಸ್ಯರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಶಾಲಾ ಹಂತದಲ್ಲಿ 3.5 ಲಕ್ಷ ಮಕ್ಕಳು ರೋಟರಿ ಸೇವೆಯಲ್ಲಿ ಇದ್ದು, ಕಾಲೇಜು ಹಂತದಲ್ಲಿ 2 ಲಕ್ಷ ಮಂದಿ ಮಕ್ಕಳು ರೋಟರಿ ಸಂಸ್ಥೆಗೆ ನೋಂದಣಿ ಮಾಡಿಕೊಂಡು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಒಟ್ಟು ವಿಶ್ವದಲ್ಲಿ 21 ಲಕ್ಷ ಮಂದಿ ರೋಟರಿ ಸ್ವಯಂ ಸೇವಕರು ಸಮಾಜದ ಸೇವೆಗಾಗಿ ದುಡಿಯುತ್ತಿದ್ದಾರೆ ಎಂದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಅಧ್ಯಕ್ಷ ಬಿ.ಕೆ. ಗಂಗಾಧರ್, ಪ್ರಾಂಶುಪಾಲರಾದ ಡಾ.ಕೆ.ಜಿ. ಕವಿತಾ ಮಾತನಾಡಿದರು.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-29

1906: ಅಮೆರಿಕದ ಕ್ಯಾಲಿಫೋರ್ನಿಯಾದ an Francisco ನಗರದಲ್ಲಿ ಭೀಕರ ಭೂಕಂಪ ಸಂಭವಿಸಿ ಸಾವಿರಾರು ಜನರು ಸಾವನ್ನಪ್ಪಿದರು, ನಗರ ಬಹುತೇಕ ನಾಶವಾಯಿತು.

1942: ದ್ವಿತೀಯ ವಿಶ್ವಯುದ್ಧದ ವೇಳೆ ಅಮೆರಿಕಾ ಜಪಾನ್ ಮೇಲೆ ನಡೆಸಿದ ಪ್ರಸಿದ್ಧ Doolittle Raid ದಾಳಿ ನಡೆಯಿತು.

1980: Zimbabwe ದೇಶವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

2008: ಭಾರತ ತನ್ನ ಮೊದಲ ಮಾನವ ರಹಿತ ಚಂದ್ರಯಾನ ಯೋಜನೆ -1 ಅನ್ನು ಇದೇ ದಿನ ಯಶಸ್ವಿಯಾಗಿ ಪ್ರಾರಂಭಿಸಿತು.

**ಜನನ**

1859: ಕ್ರಿಕೆಟ್ ಕ್ರೀಡೆಯನ್ನು ಅಭಿವೃದ್ಧಿಪಡಿಸಿದ ಬ್ರಿಟಿಷ್ ಆಡಳಿತಗಾರ Lord Harris

**ಮರಣ**

1955: ಪ್ರಸಿದ್ಧ ವಿಜ್ಞಾನಿ Albert Einstein

# ಜನಪದ ಪೂರ್ವಜರು ನೀಡಿದ ಅಮೂಲ್ಯ ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜನಪದ ಎಂಬುದು ಪೂರ್ವಜರು ನಮಗೆ ನೀಡಿದ ಬಹುದೊಡ್ಡ ಕೊಡುಗೆ, ಅದನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ರಂಗಕರ್ಮಿ ಮತ್ತು ದೊಡ್ಡ ಬೀಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಾಜ ಹೇಳಿದರು.

ತಾಲೂಕಿನ ದೊಡ್ಡ ಬೀಕನಹಳ್ಳಿ ಆಂಜನೇಯ ಸ್ವಾಮಿ ದೇವಾಲಯ ಆವರಣದಲ್ಲಿ ವಾಲ್ಮೀಕಿ ಮಹಿಳಾ ಸಾಂಸ್ಕೃತಿಕ ಕಲಾ ಸಂಸ್ಥೆ ಜಾಗರವಳ್ಳಿ, ಕರ್ನಾಟಕ ಜನಪದ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಜನಪದ ಸಂಭ್ರಮ ಮತ್ತು ವಿಚಾರ ಸಂಕಿರಣ ಎಂಬ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.



ಜನಪದದಲ್ಲಿ ಹೆಣ್ಣಿಗೆ ಹೆಚ್ಚಿನ ಪ್ರಾಶಸ್ತವಿದೆ. ಎಲ್ಲದಕ್ಕೂ ಹೆಣ್ಣೇ ಮೊದಲು ಎಂಬುದನ್ನು ನಮ್ಮ ಪುರಾಣದಲ್ಲಿ ಕಾಣಬಹುದು. ಹಾಗೆ ಇಂಥ ಪ್ರಮುಖ ಕಲೆಗಳಾದ ಕೋಲಾಟ, ಸೋಬಾನೆ ಪದ, ಬೀಸೋ ಕಲ್ಲಿನ ಪದ, ಸುಗ್ಗಿ ಕುಣಿತ, ಸೋಮನ ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ಭಜನೆ ಗೀಗಿ ಪದ, ಕರ ಪಾಲು ಮೇಳ, ವೀರಗಾಸೆ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಅಗತ್ಯ ಇದೆ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸಣ್ಣಚಾರಿ ಮಾತನಾಡಿ, ಯುವ ಪೀಳಿಗೆಗೆ ಪರಿಚಯವೇ ಇಲ್ಲದ ಅನೇಕ ಕಲೆಗಳು ಹಾಗೂ ಕಲಾವಿದರನ್ನು ಗುರುತಿಸಿ ವೇದಿಕೆ ನೀಡುವುದರ ಜೊತೆಗೆ ಅವರಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಕೆಲಸ ಆಗಬೇಕು. ಆಧುನಿಕತೆಯ ಹೆಸರಲ್ಲಿ ಪಾಶ್ಚಿಮಾತ್ಯ ಪರಂಪರೆಯನ್ನು ಅನುಸರಿಸುತ್ತ ಬಂದಿರುವ ನಮಗೆ ನಮ್ಮ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ಜನಪದದ ಮಹತ್ವವನ್ನು ಅರಿತು ಅದನ್ನು ಉಳಿಸಿ ಬೆಳೆಸುವ ಕೆಲಸಗಳಾಗಬೇಕು ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248